CC-O. In Public Domain. Digitized by eGangotri



ಶಾಲೆಯ ಕಥೆಗಳು-2

ಸತ್ಯದ ಸಾಮರ್ಥ್ಯ

ಕೆ. ರಾಮಕೃಷ್ಣ ಉಡುಪ

ಗೀತಾ ಬುಕ್ ಹೌಸ್ ಪ್ರಕಾಶಕರು ಮೈಸೂರು

Sri Vidyabharathi Book Centre, Sringeri

CC-O. In Public Domain. Digitized by eGangotri

Sri Vidyabharathi Book Centre, Sringeri

ಶಾಲೆಯ ಕಥೆಗಳು – 2
CC-O. In Public Domain. Digitized by eGangotri

ಸತ್ಯದ ಸಾಮರ್ಥ್ಯ

ಕೆ. ರಾಮಕೃಷ್ಣ ಉಡುಪ, ಎಂ.ಎ., ಬಿ.ಟಿ.

ಗೀತಾ ಬುಕ್ ಹೌಸ್ : ಪ್ರಕಾಶಕರು : ಮೈಸೂರು

Sri Vidyabharathi Book Centre, Sringeri

SATYADA SAMARTHYA ('SHALEYA KATHEGALU' SERIES, No. 2) by Professor K. RAMAKRISHNA UDUPA, M.A., Principal and Professor of Kannada (RETD.), Department of Collegiate Education (Karnataka), No. M-5, 'Srikara', Kuvempu Nagar, Mysore 570 023. Published by GEETHA BOOK HOUSE, K.R. Circle, Mysore 570 001. First Published 1986.

CC-0. In Public Domain. Digitized by eGangotri

ಪ್ರಥಮ ಮುದ್ರಣ 1986

ಕಾಪಿರೈಟ್ © ಕೆ. ರಾಮಕೃಷ್ಣ ಉಡುಪ

ಕೆಲವು ಸುಪ್ರಸಿದ್ಧ ಹಿಂದೀ ಕಥೆಗಳನ್ನು ಓದಿ, ಅವನ್ನು ಸ್ಥೂಲವಾಗಿ ಆಧಾರವಾಗಿಟ್ಟು ಕೊಂಡು ಈ ಕಥೆಗಳನ್ನು ಬರೆದಿದ್ದೇನೆ. ಶಾಲಾ ಜೀವನಕ್ಕೆ ಸಂಬಂಧಿಸಿದ ಈ ಸರಸ ಕಥೆಗಳು ಶಾಲಾ ಮಕ್ಕಳಿಗೆ ಪ್ರಿಯವೂ, ಹಿತವೂ ಆದೀತೆಂದು-ಭಾವಿಸುತ್ತೇನೆ.

—ಲೇಖಕ

ಮುದ್ರಕರು : ಜೆ. ಎಸ್. ನಾಗೇಂದ್ರ
ಕರ್ನಾಟಕ ಪ್ರೆಸ್, ಚಾಮರಾಜಪುರಂ, ಮೈಸೂರು 570 004

Sri Vidyabharathi Book Centre, Sringeri

CC-O. In Public Domain. Digitized by eGangotri

ಸತ್ಯದ ಸಾಮರ್ಥ್ಯ

ಬಾರಾಪುರದ ಮಿಡ್ಲ್ ಸ್ಕೂಲ್ ಹೆಡ್ಮಾಸ್ಟರ್ ಶಂಕರರಾಯರಿಗೆ ತೋಟಗಾರಿಕೆಯ ಪ್ರೇಮ ಸ್ವಲ್ಪ ವಿಶೇಷವಾಗಿತ್ತು. ಅವರು ಶಾಲಾ ತೋಟದ ಬೇರೆ ಬೇರೆ ಪಾತಿಗಳಲ್ಲಿ ಬಣ್ಣಬಣ್ಣದ ಹೂಗಿಡಗಳನ್ನು ಬೆಳೆಸಿದ್ದರು. ಬಳ್ಳಿಗಳನ್ನು ಹರಡಿಸಿ ಬಾಗಿಲುಗಳ ಮೇಲೆ ಸಹ ಹೂಬಳ್ಳಿಗಳು ಹರಡುವಂತೆ ಮಾಡಿದ್ದರು. ಇವೆಲ್ಲದರಿಂದ ಶಾಲೆಯ ಶೋಭೆಯು ಹೆಚ್ಚಾಗಿತ್ತು. ಅವರು ಎಲ್ಲ ಕ್ಲಾಸಿನ ಮಕ್ಕಳಿಂದಲೂ ತೋಟಕ್ಕೆ ನೀರು ಹಾಕುವ, ನಿರ್ಮಲ ಮಾಡುವ, ಹೊಂಡ ತೋಡಿಸುವ ಕೆಲಸ ಮಾಡಿಸುತ್ತಿದ್ದರು. ಹೆಚ್ಚಿನ ಮಕ್ಕಳು ಈ ಕೆಲಸವನ್ನು ಬಹು ಉತ್ಸಾಹದಿಂದ ಮಾಡುತ್ತಿದ್ದರು. ಇದರಿಂದ ಅವರಿಗೆ ಒಂದು ತರದ ವಿನೋದ ದೊರಕುತ್ತಿತ್ತು.

ಆದರೆ ಎಂಟನೇ ತರಗತಿಯಲ್ಲಿ ನಾಲ್ಕೈದು ದೊಡ್ಡ ಜಮೀನ್ದಾರರ ಮಕ್ಕಳೂ ಇದ್ದರು. ಇಂತಹ ಮನೋರಂಜಕ ಕಾರ್ಯವೂ ಸಹ ಅವರ ಮಟ್ಟಿಗೆ ನಿಷ್ಪ್ರಯೋಜಕವೆಂದು ತೋರುತ್ತಿತ್ತು. ಅವರು ಎಳೆತನದಿಂದಲೂ ಆಲಸ್ಯಮಯವಾದ ಜೀವನ ನಡೆಸಿದವರು. ಐಶ್ವರ್ಯದ ದುರಭಿಮಾನವು ಅವರ ತಲೆಗೆ ಏಡರಿತ್ತು. ಸ್ವತಃ ಮಣ್ಣಿನ ಕೆಲಸ ಮಾಡುವುದು ಹೇಯವಾದ ಕಾರ್ಯವೆಂದು ಅವರು ಎಣಿಸುತ್ತಿದ್ದರು. ಹಾಗಾಗಿ ತೋಟದ ವಿಚಾರದಲ್ಲಿ ಅವರಿಗೆ ಬೇಸರವೇ ಇತ್ತು.

Sri Vidyabharathi Book Centre, Sringeri

CC-O. In Public Domain. Digitized by eGangotri

ಏನಾದರೂ ಕೆಲಸ ಮಾಡುವ ಸಂದರ್ಭ ಅವರ ಪಾಲಿಗೆ ಬಂದರೆ ಒಂದಲ್ಲ ಒಂದು ನೆಪ ಹೂಡಿ ಜಾರಿಕೊಳ್ಳುತ್ತಿದ್ದರು. ಅಷ್ಟು ಮಾತ್ರವೇ ಅಲ್ಲ. ಬೇರೆ ಹುಡುಗರನ್ನೂ ಹಾಸ್ಯ ಮಾಡಿ ಓಡಿಸುತ್ತಿದ್ದರು. ಅವರನ್ನುತ್ತಿದ್ದರು—'ಓದುವುದು ಶಾಸ್ತ್ರ; ಮಾರುವುದು ಮಾಂಸ! ಒಂದು ವೇಳೆ ಹಾರೆ ಗುದ್ದಲಿಗಳಿಂದಲೇ ಕೆಲಸ ಮಾಡುವುದಿದ್ದರೆ ಶಾಲೆಗೆ ಬಂದು ಈ ಸ್ಲೇಟು ಪುಸ್ತಕಗಳಿಂದ ತಲೆ ಬಡಿದುಕೊಳ್ಳುವುದಾದರೂ ಏಕೆ? ಇಲ್ಲಿ ಬರುವದು ಓದಲಿಕ್ಕೆ; ಕೂಲಿ ಕೆಲಸ ಮಾಡಲಿಕ್ಕಲ್ಲ!'

ಶಂಕರರಾಯರು ಇವರ ಇಂತಹ ಅನಾದರಕ್ಕೆ ಆಗಾಗ್ಗೆ ಶಿಕ್ಷೆ ವಿಧಿಸುತ್ತಿದ್ದರು. ಅದರಿಂದಾಗಿ ಇವರ ತೋಟದ ದ್ವೇಷ ಇನ್ನಷ್ಟು ಹೆಚ್ಚಾಗುವಂತಾಯಿತು. ಅದೇ ಬೆಳೆದು ಎಲ್ಲಿಯವರೆಗೆ ಬಂತೆಂದರೆ—ಒಂದು ದಿನ ಎಲ್ಲ ಒಟ್ಟು ಸೇರಿ ಆ ಹೂದೋಟವನ್ನೇ ಸೂರೆಮಾಡುವ ನಿಶ್ಚಯಕ್ಕೂ ಬಂದರು.

ಹತ್ತು ಗಂಟೆಗೆ ಶಾಲೆ ಆರಂಭವಾಗುತ್ತಿತ್ತು. ಆ ದಿನ ಆ ಕೆಲವರೆಲ್ಲ ಒಟ್ಟಾಗಿ ಎಂಟು ಗಂಟೆಗೇ ಬಂದುಬಿಟ್ಟರು. ತೋಟದೊಳಗೆ ನುಗ್ಗಿ ಸಸಿಗಳನ್ನೆಲ್ಲ ನಿರ್ಮೂಲ ಮಾಡ ಲಾರಂಭಿಸಿದರು. ಎಷ್ಟೋ ಗಿಡಗಳನ್ನು ಹರಿದುಹಾಕಿದರು. ಎಷ್ಟೋ ಪಾತಿಗಳನ್ನು ಒಡೆದುಹಾಕಿದರು. ನೀರು ಹೋಗುವ ತೋಡುಗಳನ್ನು ಬಡಿದುಬಿಟ್ಟರು. ದಂಡೆಗಳನ್ನು ಕಳಚಿಬಿಟ್ಟರು. ಆದರೆ ಭಯದಿಂದ ಎದೆ ಮಾತ್ರ ಧಡಧಡ

Sri Vidyabharathi Book Centre, Sringeri

CC-O. In Public Domain. Digitized by eGangotri

ಹೇಳುತ್ತಿತ್ತು. ಎಲ್ಲಿಯಾದರೂ ಯಾರಾದರೂ ನೋಡಿ ಬಿಟ್ಟರೆ! ಆದರೆ ಅಷ್ಟು ಸಣ್ಣ ತೋಟವನ್ನು ಹಾಳುಮಾಡಲಿಕ್ಕೆ ಎಷ್ಟು ಸಮಯ ಬೇಕು? ಕುಂಬಾರನಿಗೆ ವರುಷ, ದೊಣ್ಣೆಗೆ ನಿಮಿಷ! ಅಂತೂ ತುಂಬಿ ಕಂಗೊಳಿಸುತ್ತಿದ್ದ ಹೂದೋಟವು ಸಂಪೂರ್ಣ ನಾಶವಾಗಿಹೋಯಿತು!

ತಮ್ಮ ಕೆಲಸ ಮುಗಿಸಿ ಬಂದಿದ್ದವರೆಲ್ಲರೂ ಹೊರಟರು. ಆದರೆ ಹೊರ ಗೇಟಿನ ಹತ್ತಿರ ಬಂದಿದ್ದರು ಮಾತ್ರ; ಸಹಪಾಠಿಯೊಬ್ಬನ ತಲೆ ತೋರಿಬಂತು! ಅವನೊಬ್ಬ ಕ್ಷೀಣ, ದರಿದ್ರ; ಆದರೂ ಕಲಿಯುವುದರಲ್ಲಿ ಚತುರನಾದ ಹುಡುಗನಾಗಿದ್ದನು. ಅವನ ಹೆಸರು ರಾಜಣ್ಣ. ಆತ ಬಹಳ ಗಂಭೀರ ಹಾಗೂ ಶಾಂತಸ್ವಭಾವದವನಾಗಿದ್ದನು. ಈ ಗಲಾಟೆ ಮಾಡುವ ಹುಡುಗರಿಗೆ ಅವನ ಮೇಲೆ ಸ್ವಲ್ಪ ಮಾತ್ಸರ್ಯವೂ ಇತ್ತು. ಆತ ನನ್ನು ನೋಡಿದೊಡನೆ ಇವರ ಪ್ರಾಣವೇ ಹಾರಿಹೋದಂತಾಯಿತು. ಆತ ಖಂಡಿತವಾಗಿಯೂ ನೋಡಿಬಿಟ್ಟ! ಹೆಡ್ಮಾಸ್ಟರರ ಹತ್ತಿರ ಹೇಳದೆ ಇರಲಾರನು! ಕಳ್ಳರು ಸಿಕ್ಕಿಹೋದರು! ಇನ್ನು ಬೇರೆ ದಾರಿಯೇ ಇಲ್ಲ! ಈ ಪಿಶಾಚಿ ಈ ಹೊತ್ತಿನಲ್ಲೇಕೆ ಬಂದನಪ್ಪಾ?

ಕೊನೆಗೆ ಅವರೆಲ್ಲ ತಮ್ಮತಮ್ಮೊಳಗೆ ಮಾತಾಡಿಕೊಂಡರು. ರಾಜಣ್ಣನನ್ನು ಕೈಯೊಳಗೆ ಮಾಡಿಕೊಳ್ಳುವುದೆಂದು ನಿಶ್ಚಯವಾಯಿತು. ಜಗನ್ನಾಥನು ಅವರ ಮುಖಂಡನಾಗಿದ್ದನು. ಹಾಗಾಗಿ ಅವನೇ ಮುಂದೆ ಹೋಗಿ ಹೇಳಿದನು: 'ರಾಜಣ್ಣ, ಏನಿದ್ದು, ಇಷ್ಟು ಬೇಗ ಬಂದೆ? ನಾವೆಲ್ಲ ಸೇರಿ ನಮ್ಮ ಕುತ್ತಿ

Sri Vidyabharathi Book Centre, Sringeri

CC-O. In Public Domain. Digitized by eGangotri

ಗೆಯ ಮೇಲಿನ ದೊಡ್ಡ ಪಾಶವನ್ನೇ ಕಡಿದುಹಾಕಿಬಿಟ್ಟೆವು. ನಮ್ಮ ಹೆಡ್ಮಾಸ್ಟರರು ಯಾವಾಗಲೂ ತೋಟದೊಳಹೋಗಿ, ಅದು ಮಾಡಿ, ಇದು ಮಾಡಿ—ಎಂದು ಬಹಳ ತೊಂದರೆ ಕೊಡುತ್ತಿದ್ದರಲ್ಲ? ಇನ್ನು ನಮಗೆ ಆ ಕಾಟವೇ ಇರಲಾರದು. ಆದರೆ ಮಹಾರಾಯ! ನೋಡು, ಗುಟ್ಟು ಮಾತ್ರ ಬಿಡಬೇಡ. ಹೆಡ್ಮಾಸ್ಟರರಿಗೆ ಗೊತ್ತಾದರೆ ನಮ್ಮನ್ನು ಬಿಡಲಿಕ್ಕಿಲ್ಲ. ಮತ್ತೆ ನಮ್ಮ ಹಾಗೂ ನಿನ್ನ ಸ್ನೇಹಾಚಾರವೇ ಕಡಿದುಹೋದೀತು!'

ಆಗ ಜಯರಾಮನೆಂದ: 'ಹೆಡ್ಮಾಸ್ಟರರ ಹತ್ತಿರ ಹೇಳಿದ್ದರಿಂದೇನು ಸಿಗುತ್ತದೆ? ಎಷ್ಟಾದರೂ ಈತ ನಮ್ಮವನೇ ಅಲ್ಲವೇ? ನಾವೀಗ ಮಾಡಿದ್ದಾದರೂ ಎಲ್ಲರಿಗೋಸ್ಕರ ತಾನೇ? ನಮ್ಮ ಕೆಲವರ ಹಿತಕ್ಕಾಗಿಯೇ ಅಲ್ಲ. ಬಾ, ಮಹಾರಾಯಾ; ಅಂಗಡಿಯವರೆಗೆ ಹೋಗಿ ಸ್ವಲ್ಪ ಬಾಯಿ ಸಿಹಿ ಮಾಡಿಕೊಂಡು ಬರುವ.'

ಆಗ ರಾಜಣ್ಣ ಹೇಳಿದ: 'ಇಲ್ಲ; ನಾನು ಬರುವುದಿಲ್ಲ. ಇಂದು ಮನೆಯಲ್ಲಿ ಪಾಠ ಕಲಿಯಲಿಕ್ಕೆ ಸಮಯ ಸಿಕ್ಕಿಲ್ಲ. ಹಾಗಾಗಿ ಇಲ್ಲಿಯೇ ಕೂತು ಸ್ವಲ್ಪ ಓದುತ್ತೇನೆ.'

ಜಗನ್ನಾಥ—'ಹಾಗಾದರೆ ಹೆಡ್ಮಾಸ್ಟರರ ಹತ್ತಿರ ಹೇಳುವುದಿಲ್ಲ ತಾನೇ?'

ರಾಜಣ್ಣ—'ನಾನಾಗಿ ಅವರ ಹತ್ತಿರ ಹೇಳುವುದಿಲ್ಲ. ಆದರೆ ಅವರೇ ನನ್ನ ಹತ್ತಿರ ಕೇಳಿದರೆ?'

ಜಗ—'ನನಗೆ ಗೊತ್ತಿಲ್ಲವೆಂದು ಹೇಳಿಬಿಡು.'

Sri Vidyabharathi Book Centre, Sringeri

CC-O. In Public Domain. Digitized by eGangotri

ರಾಜಣ್ಣ—'ಹಾಗೆ ಸುಳ್ಳು ಹೇಳಲಿಕ್ಕೆ ನನ್ನಿಂದಾಗದು.'

ಜಯ—'ಎಲ್ಲಿಯಾದರೂ ನೀನು ಚಾಡಿ ಹೇಳಿ ನಮಗೆ ಏಟು ಬೀಳಿಸಿದರೆ ನಿನ್ನ ಬೆನ್ನು ಪುಡಿಮಾಡದೆ ಬಿಡಲಿಕ್ಕಿಲ್ಲ.'

ರಾಜಣ್ಣ—'ನಾನು ಹೇಳಲಿಲ್ಲವೇ? ನಾನಾಗಿ ಚಾಡಿ ಹೇಳಹೋಗುವುದಿಲ್ಲ. ಆದರೆ ಉಪಾಧ್ಯಾಯರು ನನ್ನೊಡನೆ ಕೇಳಿದರೆ ಸುಳ್ಳು ಹೇಳುವುದೂ ಇಲ್ಲ.'

ಜಯ—'ಹಾಗಾದರೆ ನಾವು ನಿನ್ನ ಎಲುಬು ಪುಡಿ ಮಾಡದೆ ಬಿಡುವುದೂ ಇಲ್ಲ.'

ರಾಜಣ್ಣ—'ಸರಿ; ನೋಡೋಣ.'

2

ಗಂಟೆ ಹತ್ತಾಯಿತು. ಹೆಡ್ಮಾಸ್ಟರ್ ಶಂಕರರಾಯರು ಬಂದು ಹೂದೋಟದ ದುರ್ದಸೆಯನ್ನು ನೋಡಿ ಕೋಪದಿಂದ ಬೆಂಕಿಯಂತಾದರು. ತೋಟ ಹಾಳಾದುದರಿಂದ ಅವರಿಗೆ ತುಂಬಾ ವ್ಯಸನವಾಗಿತ್ತು. ಅದಕ್ಕಿಂತಲೂ ವಿಶೇಷವಾಗಿ ಮಕ್ಕಳ ತುಂಟತನದಿಂದಾಗಿ ದುಃಖವಾಗಿತ್ತು. ಯಾವುದಾದರೊಂದು ಆಡು ಅಥವಾ ಕೋಣ ಬಂದು ತೋಟ ಕೆಡಿಸಿದ್ದರೆ ಅವರು ಕೈ ತಿಕ್ಕಿಕೊಂಡು ಸುಮ್ಮನಿರುತ್ತಿದ್ದರು. ಆದರೆ ಮಕ್ಕಳ ಈ ಅತ್ಯಾಚಾರವನ್ನು ಮಾತ್ರ ಅವರಿಗೆ ಸಹಿಸಲಾಗಲಿಲ್ಲ. ವಿದ್ಯಾರ್ಥಿಗಳು ಕ್ಲಾಸಿನಲ್ಲಿ ಹೋಗಿ ಕೂತುಕೊಂಡೊಡನೆಯೇ ಕೆಂಡದಂತಾಗಿ ಬಂದು ಕೇಳಿದರು—'ಯಾರದು

Sri Vidyabharathi Book Centre, Sringeri

CC-O. In Public Domain. Digitized by eGangotri

ನಮ್ಮ ಹೂದೋಟ ಹಾಳುಮಾಡಿದ್ದು ?'

ನಿಶ್ಶಬ್ದತೆಯು ಇಡೀ ಶಾಲೆಯನ್ನೇ ಆವರಿಸಿದಂತಾಯಿತು. ಅಪರಾಧಿಗಳ ಮುಖವೆಲ್ಲ ಕಪ್ಪಾಯಿತು. ಮೇಲ್ತರಗತಿಯ ಇಪ್ಪತ್ತೈದು ವಿದ್ಯಾರ್ಥಿಗಳಲ್ಲಿ ಈ ವಿಚಾರವನ್ನು ತಿಳಿಯದವರು ಯಾರೂ ಇರಲಿಲ್ಲ. ಆದರೂ ಎದ್ದುನಿಂತು ಹೇಳಿಬಿಡುವ ಧೈರ್ಯ ಯಾರಿಗೂ ಇರಲಿಲ್ಲ. ಎಲ್ಲರೂ ಮುಖ ತಗ್ಗಿಸಿಕೊಂಡು ಮೌನವಾಗಿ ಕೂತಿದ್ದರು.

ಹೆಡ್ಮಾಸ್ಟರರ ಕೋಪ ಇನ್ನೂ ಹೆಚ್ಚಾಯಿತು. ಜೋರಾಗಿ ಹೇಳಲಾರಂಭಿಸಿದರು : 'ನಿಮ್ಮ ಪೈಕಿಯೇ ಯಾರದೋ ತುಂಟತನ ಇದು ಎಂದು ನನಗೆ ಗೊತ್ತಿದೆ. ಯಾರಿಗೆ ತಿಳಿದಿದೆಯೋ ಅವರು ಸ್ಪಷ್ಟವಾಗಿ ಹೇಳಿಬಿಡುವುದೊಳ್ಳೇದು. ಇಲ್ಲವಾದರೆ ನಾನೀಗ ತಲೆಯಿಂದ ತಲೆಗೆ ಎಲ್ಲರಿಗೂ ಹೊಡೆಯಲಾರಂಭಿಸುವೆ. ತಪ್ಪು ಮಾಡದಿದ್ದರೂ ನಮ್ಮನ್ನು ಹೊಡೆದರೆಂದು ಮಾತ್ರ ಆಮೇಲೆ ಹೇಳಬಾರದು.'

ಯಾವ ವಿದ್ಯಾರ್ಥಿಯೂ ಬಾಯಿ ಬಿಡಲಿಲ್ಲ. ಅದೇ ಮೌನ!

ಹೆಡ್ಮಾಸ್ಟರ್—'ದೇವಣ್ಣಾ ! ನಿನಗೆ ಗೊತ್ತಿದೆಯೋ ?'

ದೇವಣ್ಣ—'ಇಲ್ಲ ಸಾರ್ ; ನನಗೆ ಏನೂ ಗೊತ್ತಿಲ್ಲ.'

ಹೆಡ್ಮಾಸ್ಟರ್—'ರಾಜಣ್ಣ ! ನೀನೆಂದೂ ಸುಳ್ಳು ಹೇಳುವವನಲ್ಲ. ನಿನಗೆ ತಿಳಿದಿದೆಯೇ ?'

ರಾಜಣ್ಣ ನೆಟ್ಟಗೆ ನಿಂತುಬಿಟ್ಟ. ಅವನ ಮುಖದ ಮೇಲೆ

Sri Vidyabharathi Book Centre, Sringeri

 . In Public Domain. Digitized by eGangotri

ವೀರತನದ ಪ್ರಕಾಶವಿತ್ತು. ಹಾಗಾಗಿ 'ಹೌದು ಸಾರ್' ಎಂದ.

ಹೆಡ್ಮಾಸ್ಟರ್ 'ಶಾಭಾಸ್' ಎಂದರು.

ಅಪರಾಧಿಗಳೆಲ್ಲ ರಾಜಣ್ಣನತ್ತ ಕೆಂಗಣ್ಣಿನಿಂದ ನೋಡಿದರು. ಒಳಗೊಳಗೇ ಹೇಳತೊಡಗಿದರು : 'ಒಳ್ಳೇದು, ನೋಡುವಾ.'

3

ಶಂಕರರಾಯರು ಬಹಳ ಧೀರಪ್ರಕೃತಿಯ ಮನುಷ್ಯರಾಗಿದ್ದರು. ಸಾಧ್ಯವಿದ್ದ ಮಟ್ಟಿಗೆ ಮಕ್ಕಳಿಗೆ ಶಿಕ್ಷೆ ಕೊಡುತ್ತಿರಲಿಲ್ಲ. ಆದರೆ ಇಂತಹ ದುಷ್ಟತನಕ್ಕೆ ಶಿಕ್ಷೆ ಕೊಡುವ ವಿಚಾರದಲ್ಲಿ ಸ್ವಲ್ಪವೂ ದಯೆ ತೋರಿಸುತ್ತಿರಲಿಲ್ಲ. ಹಾಗಾಗಿ ದೊಡ್ಡ ಬೆತ್ತ ತರಿಸಿ ಐದೂ ಅಪರಾಧಿಗಳಿಗೆ ಬಲವಾಗಿ ಹತ್ತು ಹತ್ತು ಛಡಿ ಬಾರಿಸಿದರು. ಆ ಬಳಿಕ ಇಡೀ ದಿನ ಬೆಂಚಿನ ಮೇಲೆ ನಿಲ್ಲಿಸಿದರು. ಮಾತ್ರವಲ್ಲದೆ ಅವರ ಗುಣ-ನಡತೆಯ ರೆಕಾರ್ಡಿನಲ್ಲಿ ಕಪ್ಪು ಗೆರೆಯನ್ನೂ ಎಳೆದುಬಿಟ್ಟರು.

ಆ ತುಂಟರ ಪಂಗಡದವರಿಗೆ ರಾಜಣ್ಣನ ಮೇಲೆ ಬಲವಾದ ದ್ವೇಷ ಮೂಡಿಬಂತು. ಅವನ ಸತ್ಯಸಂಧತೆಗಾಗಿ ರಕ್ತವನ್ನೇ ಕಾರಿಸಿಬಿಡಬೇಕೆನ್ನುವಷ್ಟು ಕೋಪ ಬಂದುಹೋಯಿತು. ಯಾವಾಗಲೂ ಶಿಕ್ಷೆಯಲ್ಲಿ ಸಹಾನುಭೂತಿಯನ್ನು ಸೆಳೆಯುವ ಶಕ್ತಿ ಇರುತ್ತದೆ. ಹಾಗಾಗಿ ಇಷ್ಟರಲ್ಲೇ ಅಧಿಕಾಂಶ ವಿದ್ಯಾರ್ಥಿಗಳು ಅಪರಾಧಿಗಳ ಮಿತ್ರರಾಗಿಬಿಟ್ಟರು. ರಾಜಣ್ಣನಿಗೆ ಒಂದು ಕೈ ತೋರಿಸಿಯೇಬಿಡುವ ಷಡ್ಯಂತ್ರಗಳೆಲ್ಲ ರೋಚಿತ

Sri Vidyabharathi Book Centre, Sringeri

CC-O. In Public Domain. Digitized by eGangotri

ವಾದುವು. ಇನ್ನಾತ ಶಾಲೆಗೆ ಬಂದು ಮುಖವನ್ನೇ ತೋರಿಸ ದಂತೆ ಮಾಡಿಬಿಡಬೇಕೆಂಬ ಯೋಚನೆಯಾಯಿತು. ನಮ್ಮ ಗುಟ್ಟನ್ನು ಹೊರಹಾಕುವ ಗುಪ್ತಚಾರ! ಮೋಸಗಾರ!— ಇಂದೀಗ ಸತ್ಯದ ಪ್ರತಿಫಲ ತೋರಿಸಿಯೇಬಿಡಬೇಕು!

ಪಾಪ! ರಾಜಣ್ಣನಿಗೆ ಈ ಗೂಢ ತಂತ್ರದ ಸುದ್ದಿಯೇ ಗೊತ್ತಾಗಲಿಲ್ಲ. ವಿದ್ರೋಹಿಗಳೆಲ್ಲ ಈ ವಿಚಾರದಲ್ಲಿ ಆತನನ್ನು ಅಂಧಕಾರದಲ್ಲಿಯೇ ಇಟ್ಟುಬಿಡಲು ಯೋಚಿಸಿದ್ದರು.

ಶಾಲೆ ಬಿಟ್ಟೊಡನೆಯೇ ರಾಜಣ್ಣನು ಮನೆಯತ್ತ ಹೊರ ಟನು. ದಾರಿಯಲ್ಲೊಂದು ಸೀಬೆ ಮರವಿತ್ತು. ಅಲ್ಲೇ ಜಗನ್ನಾಥ ಹಾಗೂ ಜಯರಾಮ, ಇನ್ನಿತರ ಕೆಲ ಮಕ್ಕಳೊ ಡನೆ ಕಾದು ನಿಂತಿದ್ದರು. ಅವರನ್ನೆಲ್ಲ ನೋಡಿದೊಡನೆಯೇ ರಾಜಣ್ಣ ಬೆಚ್ಚಿಬಿದ್ದನು. ತನ್ನನ್ನು ಹಿಡಿಯಲಿಕ್ಕಾಗಿಯೇ ಇವರೆಲ್ಲ ಕಾದು ನಿಂತಿದ್ದಾರೆಂದು ಆತನಿಗೆ ತಿಳಿದುಹೋಯಿತು. ಆದರೆ ತಪ್ಪಿಸಿಕೊಳ್ಳುವ ದಾರಿಯೇ ಇರಲಿಲ್ಲ. ಹಾಗಾಗಿ ಸ್ವಲ್ಪ ಹೆದರಿಕೊಂಡೇ ಮುಂದುವರಿದನು. ಒಡನೆಯೇ ಜಗ ನ್ನಾಥನು—'ಬಾರೋ ಮಗನೇ! ಬಹಳ ಹೊತ್ತಿನಿಂದ ನಿನ್ನನ್ನು ಕಾಯುತ್ತಿದ್ದೇವೆ. ಮುಂದೆ ಬಾ—ಸತ್ಯ ಹರಿಶ್ಚಂದ್ರ! ನಮ್ಮದೊಂದು ಬಹುಮಾನ ಪಡೆದು ಹೋಗು' ಎಂದು ವ್ಯಂಗ್ಯವಾಗಿ ಮಾತಾಡುತ್ತಾ ಅಡ್ಡ ನಿಂತನು.

ರಾಜಣ್ಣ—'ದಾರಿಯಿಂದೇಳು. ನನ್ನನ್ನು ಮುಂದೆ ಹೋಗಲು ಬಿಡು.'

Sri Vidyabharathi Book Centre, Sringeri

CC-0. In Public Domain. Digitized by eGangotri

ಜಯರಾಮ—'ಸತ್ಯಸಂಧತೆಯ ಮಧುರ ಫಲವನ್ನು ತಿಂದು ಆ ಬಳಿಕ ಹೋದರಾಗದೇ?'

ರಾಜಣ್ಣ—'ನಾನಾಗಲೇ ಹೇಳಿರಲಿಲ್ಲವೇ? ನನ್ನ ಹೆಸರು ಹೇಳಿ, ಕರೆದು ಕೇಳಿದರೆ ಹೇಳಿಯೇಬಿಡುತ್ತೇನೆಂದು.'

ಜಯ—'ನಾವು ಕೂಡ ಆಗಲೇ ಹೇಳಿಲ್ಲವೇ? ಹಾಗೆ ಮಾಡಿದರೆ ಅದರ ಪ್ರತಿಫಲ ತಿನ್ನಿಸದೆ ಬಿಡಲಿಕ್ಕಿಲ್ಲವೆಂದು.'

ಹೀಗೆ ಹೇಳುತ್ತಾ ಜಯರಾಮನು ಮುಷ್ಟಿಯನ್ನು ಬಲಪಡಿಸಿಕೊಂಡು ರಾಜಣ್ಣನ ಮೇಲೆ ಬೀಳಬಂದನು.

ಜಗನ್ನಾಥನು ಮುನ್ನುಗ್ಗಿ ರಾಜಣ್ಣನ ಎರಡೂ ಕೈಗಳನ್ನು ಹಿಡಿಯಹೋದನು. ಜಯರಾಮನ ತಮ್ಮ ಶಿವರಾಮನು ಒಂದು ಸೀಬೆ ಮರದ ರೆಂಬೆ ಹಿಡಿದುಕೊಂಡು ಹತ್ತಿರ ಬಂದನು. ಉಳಿದ ಮಕ್ಕಳು ಸುತ್ತಲೂ ನಿಂತುಕೊಂಡು ತಮಾಷೆ ನೋಡಲು ತಯಾರಾದರು. ಅವರದು 'ರಿಸರ್ವ್' ಸೇನೆಯಾಗಿದ್ದು ಅಗತ್ಯ ಬಿದ್ದರೆ ಮಿತ್ರಸೇನೆಯ ಸಹಾಯಕ್ಕೆ ಸಿದ್ಧವಾಗಿತ್ತು. ರಾಜಣ್ಣನು ಕೃಶದೇಹದ ಹುಡುಗನಾಗಿದ್ದನು. ಅವನನ್ನು ಮಣ್ಣು ಮುಕ್ಕಿಸಲಿಕ್ಕೆ ಈ ಗಟ್ಟಿಮುಟ್ಟಾದ ಮೂರು ಮಕ್ಕಳು ಧಾರಾಳವಾಗಿ ಸಾಕಾಗಿದ್ದರು. ಒಂದೇ ಕ್ಷಣದಲ್ಲಿ ಆ ಮೂವರೂ ಸೇರಿ ಈತನನ್ನು ಮಗುಚಿಹಾಕಿ ಯಾರೆಂದು ನೆರೆದವರು ಯೋಚಿಸಿದ್ದರು.

ಶತ್ರುಗಳೆಲ್ಲ ಶಸ್ತ್ರಸನ್ನದ್ಧರಾಗಿದ್ದುದನ್ನು ನೋಡಿದೊಡನೆಯೇ ರಾಜಣ್ಣನು ಅತ್ತಿತ್ತ ಓರೆಗಣ್ಣಿಂದ ನೋಡಿದನು,

Sri Vidyabharathi Book Centre, Sringeri

CC-O. In Public Domain. Digitized by eGangotri

ಕೂಡಲೇ ಹಾರಿಬಿಟ್ಟು ಶಿವರಾಮನ ಕೈಯಲ್ಲಿದ್ದ ರೆಂಬೆಯನ್ನು ರಪ್ಪನೆ ಸೆಳಕೊಂಡನು. ಬಳಿಕ ಎರಡು ಹೆಜ್ಜೆ ಮುಂದೆ ಬಂದು ಆ ಕೊಂಬೆಯನ್ನು ತಿರುಗಿಸುತ್ತಾ ಹೇಳಲಾರಂಭಿಸಿದನು—'ಸತ್ಯ ಹೇಳಿದ್ದಕ್ಕೆ ಬಹುಮಾನ ಕೊಡುವ ವೀರರು ಯಾರಿದ್ದಾರೆ? ಬನ್ನಿ, ನೋಡಿಬಿಡ್ತೀನಿ' ಎಂದು ಧೈರ್ಯವಾಗಿ ಮುಂದೊತ್ತಿ ಬಂದನು.

ಎರಡೂ ಕಡೆಗಳಿಂದಲೂ ಹೊಡೆತ ಬಡಿತ ಆರಂಭವಾಯಿತು. ರಾಜಣ್ಣನು ನಿತ್ರಾಣಿಯಾದರೂ ಚುರುಕು ಸ್ವಭಾವದವನಾಗಿದ್ದನು. ಅದರ ಮೇಲೆ ಸತ್ಯದ ವಿಶ್ವಾಸವು ಅವನ ಹೃದಯವನ್ನು ಇನ್ನಷ್ಟು ಬಲಗೊಳಿಸಿತ್ತು. ಸತ್ಯದಿಂದಾಗಿ ತಲೆ ಕಡಿದುಹೋದರೂ ಚಿಂತೆಯಿಲ್ಲ. ಆದರೆ ಮುಂದಿಟ್ಟ ಹೆಜ್ಜೆಯನ್ನು ಹಿಂದಿಡಲಾರೆನೆಂದು ನಿಶ್ಚಯಿಸಿದ್ದನು. ಬಹಳ ಹೊತ್ತಿನವರೆಗೆ ಆತನು ಮುಂದೆ ಬಂದು ಹಾರಿ ಹಾರಿ ಹೊಡೆಯುತ್ತಿದ್ದನು. ಆದರೆ ಸೀಬೆ ಮರದ ರೆಂಬೆ ಎಷ್ಟರವರೆಗೆ ಕಾದಾಡೀತು? ಕ್ರಮೇಣ ಅವನ ಪರಾಕ್ರಮವೆಲ್ಲ ಕುಂದುತ್ತಾ ಬಂತು. ಕೊಂಬೆ ಕೈಯಿಂದ ಜಾರಿ ಹೋಯಿತು. ಖಡ್ಗದಂತೆ ಅವನ ಕೈಯಲ್ಲಿ ರೆಂಬೆ ಇರುವ ತನಕ ಯಾರಿಗೂ ಅವನ ಮೈ ಮುಟ್ಟುವ ಧೈರ್ಯ ಬರಲಿಲ್ಲ. ಕೈ ಖಾಲಿಯಾದ ಬಳಿಕವೂ ಕಲ್ಲುಮಣ್ಣುಗಳಿಂದ ಶತ್ರುಗಳಿಗೆ ಉತ್ತರ ಕೊಡುತ್ತಾ ಬಂದನು. ಆದರೆ ಕೊಟ್ಟ ಕೊನೆಗೆ ಬಹುಸಂಖ್ಯೆಗೆ ಜಯವಾಯಿತು. ರಾಜಣ್ಣನ

Sri Vidyabharathi Book Centre, Sringeri

CC-0. In Public Domain. Digitized by eGangotri

ಕಿಬ್ಬೊಟ್ಟೆಗೆ ಜಯರಾಮನು ಬಲವಾಗಿ ಒಮ್ಮೆ ಗುದ್ದಿದನು. ಒಡನೆಯೇ ಆತನು ಶ್ವಾಸ ಕಟ್ಟಿ ಬೀಳುವಂತಾಯಿತು. ಕಣ್ಣು ಮೇಲುಕೆಳಗಾಯಿತು. ತಲೆತಿರುಗಿ ಮೂರ್ಛೆಬಂದು, ಬಿದ್ದೇಬಿಟ್ಟನು.

ಆದರೆ ಶತ್ರುಪಕ್ಷದವರೆಲ್ಲ ಅವನ ಈ ಅವಸ್ಥೆ ನೋಡಿ ದೊಡನೆ ಹೆದರಿಹೋದರು. ಇವನ ಪ್ರಾಣವೇ ಹಾರಿ ಹೋಯಿತೆಂದು ಎಲ್ಲರೂ ಅಲ್ಲಿಂದ ಓಡಲಾರಂಭಿಸಿದರು.

ಸುಮಾರು ಹತ್ತು ನಿಮಿಷಗಳ ನಂತರ ತಂಗಾಳಿ ತಾಗಿ ರಾಜಣ್ಣನಿಗೆ ಸ್ಮೃತಿ ಬಂತು. ಎದೆಗೆ ಸರಿಯಾಗಿ ಪೆಟ್ಟು ಬಿದ್ದಿತ್ತು. ಅಲ್ಲಲ್ಲಿ ಗಾಯವೂ ಆಗಿತ್ತು. ಎದ್ದು ನಿಲ್ಲುವ ಶಕ್ತಿಯೇ ಇರಲಿಲ್ಲ. ಆದರೂ ಕಷ್ಟದಿಂದ ಕಾಲೆಳೆದುಕೊಂಡು ಮನೆಯ ಕಡೆ ಸಾಗಿದನು.

4

ಅತ್ತ ವಿಜಯಶಾಲಿಯಾದ ಸೇನೆಯು ಓಡುತ್ತೋಡುತ್ತ ಜಯರಾಮನ ಮನೆಯತ್ತ ಸಾಗಿತು. ದಾರಿಯಲ್ಲೇ ಈ ತಂಡ ಚೆಲ್ಲಾಪಿಲ್ಲಿಯಾಗಿಹೋಯಿತು. ಒಬ್ಬ ಒಂದೆಡೆಯಿಂದ ಓಡಿದ; ಇನ್ನೊಬ್ಬ ಮತ್ತೊಂದೆಡೆಯಿಂದ. ಎಲ್ಲರಿಗೂ ಇದೊಂದು ಭಯಂಕರ ಸಮಸ್ಯೆಯಾಯಿತು. ಜಯರಾಮನ ಮನೆಯವರೆಗೆ, ಕೇವಲ ಮೂವರು ಸುದೃಢ ಬಾಲಕರು

Sri Vidyabharathi Book Centre, Sringeri

CC-O. In Public Domain. Digitized by eGangotri

ಹೋಗಿ ಮುಟ್ಟಿದರು. ಅಲ್ಲಿ ಸೇರಿದ ಬಳಿಕ ಅವರಿಗೆ ಸ್ವಲ್ಪ ಧೈರ್ಯ ಬಂತು.

ಆಗ ಜಯರಾಮನೆಂದ—'ಎಲ್ಲಿಯಾದರೂ ಸತ್ತೇ ಬಿಟ್ಟರೆ! ನನ್ನ ಪೆಟ್ಟು ಚೆನ್ನಾಗಿ ತಾಗಿಹೋಯಿತು.'

ಜಗನ್ನಾಥ--'ನೀನು ಕಿಬ್ಬೊಟ್ಟಿಗೆ ಹೊಡೆಯಬಾರದಿತ್ತು. ಪಕ್ಕೆಲುಬು ಮುರಿದುಹೋದರೆ ಬದುಕುವುದೇ ಕಷ್ಟ.'

ಜಯ—'ನಾನು ಬೇಕೆಂದು ಹಾಗೆ ಹೊಡೆದುದಲ್ಲ. ಏನೋ ತಾಗಿಹೋಯಿತು. ಈಗೇನು ಮಾಡುವುದು? ಹೇಳು, ನೋಡುವ.'

ಜಗನ್ನಾಥ—'ಮಾಡುವುದೇನನ್ನು? ಸುಮ್ಮನೆ ಕೂತಿರುವುದಷ್ಟೆ.'

ಜಯ—'ಎಲ್ಲಿಯಾದರೂ ನಾನೊಬ್ಬನೇ ಸಿಕ್ಕಿಬಿದ್ದರೆ?'

ಜಗ—'ಒಬ್ಬನೇ ಹೇಗೆ ಸಿಕ್ಕಿಬೀಳುವುದು? ಎಲ್ಲರೂ ಒಟ್ಟಾಗಿಯೇ ಇದ್ದರಾಯಿತು.'

ಜಯ—'ರಾಜಣ್ಣ ಸಾಯದೇ ಉಳಿದರೆ ಎದ್ದು ಕೊಂಡು ನೆಟ್ಟಗೆ ಹೆಡ್‌ಮಾಸ್ಟರರ ಹತ್ತಿರವೇ ಹೋದಾನು.'

ಜಗ—'ಮತ್ತೆ ಪುನಃ ನಮ್ಮ ಎಲುಬು ಪುಡಿಯಾದೀತು!'

ಜಯ—'ಅದಕ್ಕಾಗಿಯೇ ನನ್ನ ಸೂಚನೆಯೆಂದರೆ—ನಾಳೆಯಿಂದ ಶಾಲೆಗೇನೇ ಹೋಗಬಾರದು. ಪಟ್ಟಿಯಿಂದ ಹೆಸರು ತೆಗೆಸಿ, ಬೇರೆಲ್ಲಿಯಾದರೂ ಹೋಗಿ ಸೇರುವ; ಅಥವಾ ಕಾಯಿಲೆಯ ನೆಪವಿಂದ ಮನೆಯಲ್ಲೇ ಇದ್ದು ಬಿಡುವ;

Sri Vidyabharathi Book Centre, Sringeri

CC-0. In Public Domain. Digitized by eGangotri

ಒಂದೆರಡು ತಿಂಗಳಾದಮೇಲೆ, ಈ ಸಮಾಚಾರವೆಲ್ಲ ತಣ್ಣಗಾದ ಬಳಿಕ ಮತ್ತೆ ನೋಡುವ.'

ಶಿವರಾಮು—'ಆದರೆ ಆಷ್ಟರಲ್ಲಿ ಪರೀಕ್ಷೆ ಬರುವುದಲ್ಲ ?'

ಜಯ—'ಓಹೋ ! ಅದರ ಯೋಚನೆಯೇ ಇರಲಿಲ್ಲವಲ್ಲ ! ಇನ್ನು ಒಂದೇ ತಿಂಗಳು ಬಾಕಿ ಇರುವುದು !'

ಜಗ—'ಅದರಲ್ಲೂ ನೀನು ಸ್ಕಾಲರ್‌ಷಿಪ್ ತೆಗೆದುಕೊಳ್ಳುವವನಲ್ಲ ?'

ಜಯ—'ಹೌದು. ಅದಕ್ಕಾಗಿ ನಾನು ತುಂಬಾ ಶ್ರಮ ಪಟ್ಟಿದ್ದೆ. ಆದರೇನು ಮಾಡುವುದು ?'

ಜಗ—'ಅದರಲ್ಲೇನು ? ಪಾಸ್ ಮಾಡಿಯಾರು. ಆದರೆ ಸ್ಕಾಲರ್‌ಷಿಪ್ಪಿಗೆ ಚಕ್ಕರ್ ಬಿತ್ತು.'

ಶಿವ—'ಅದಿನ್ನು ರಾಜಣ್ಣನಿಗೆ ಹೋಗಬಹುದು.'

ಜಗ—'ಒಳ್ಳೆಯದು ; ಹೋದರೆ ಹೋಗಲಿ. ಪಾಪ! ಏಟು ಸಹ ತಿಂದಿದ್ದಾನೆ.'

ಮರುದಿನ ಶಾಲೆ ಆರಂಭವಾಯಿತು. ಆದರೆ ಜಗನ್ನಾಥ, ಜಯರಾಮ, ಶಿವರಾಮು-ಮೂವರೂ ಮಾಯವಾಗಿದ್ದರು. ಮಹಮ್ಮದಾಲಿಯು ಕಾಲಿಗೆ ಪಟ್ಟಿ ಹಾಕಿಕೊಂಡು ಬಂದಿದ್ದನು. ಆದರೂ ಭಯದಿಂದ ಬಹಳ ಬಾಡಿಹೋಗಿದ್ದನು. ಹಿಂದಿನ ದಿನದ ಸೇನಾದಳದವರೆಲ್ಲ ಥರಥರ ನಡುಗುತ್ತಿದ್ದರು. ಕಡಲೆಯೊಡನೆ ಎಳ್ಳನ್ನೂ ಹುರಿದುಬಿಡುವರೋ—ಎಂದು ಬಹಳ ಕಂಗಾಲಾಗಿದ್ದರು.

Sri Vidyabharathi Book Centre, Sringeri

CC-O. In Public Domain. Digitized by eGangotri

ಆದರೆ ರಾಜಣ್ಣನು ಬಂದು ಎಂದಿನಂತೆಯೇ ತನ್ನ ಕೆಲಸದಲ್ಲಿ ಮಗ್ನನಾಗಿದ್ದನು. ಹಿಂದಿನ ದಿನದ ಸಮಾಚಾರ ಜ್ಞಾಪಕವೇ ಇಲ್ಲದವನಂತೆ ವರ್ತಿಸುತ್ತಿದ್ದನು. ಯಾರೊಡನೆಯೂ ಆ ಮಾತನ್ನು ಎತ್ತಲಿಲ್ಲ. ಸಾಲದ್ದಕ್ಕೆ ತನ್ನ ಸ್ವಭಾವಕ್ಕೆ ವಿರುದ್ಧವಾಗಿ ಸ್ವಲ್ಪ ಪ್ರಸನ್ನಚಿತ್ತನಾಗಿಯೇ ಇದ್ದನು. ಅದರಲ್ಲಿಯೂ ಹಿಂದಿನ ದಿನದ ಯೋಧರೊಡನೆ ವಿಶೇಷವಾಗಿ ಸೇರಿಕೊಂಡು ಮಾತುಕತೆಯಾಡುತ್ತಿದ್ದನು. ಅವನ ವಿಚಾರದಲ್ಲಿ ಅವರೆಲ್ಲರೂ ನಿಶ್ಶಂಕರಾಗಿರಬೇಕೆಂದು ಬಯಸುತ್ತಿದ್ದನು. ಇಡೀ ರಾತ್ರಿಯ ವಿವೇಚನೆಯ ಬಳಿಕ ಅವನು ಈ ನಿರ್ಧಾರಕ್ಕೆ ಬಂದಿದ್ದನು. ಅಂದು ಸಾಯಂಕಾಲ ಮನೆಗೆ ಹೋಗುವ ಹೊತ್ತಿಗೆ ಅವನ ಉದಾರತೆಯ ಫಲ ಅವನಿಗೆ ಸಿಕ್ಕಿಯಾಗಿತ್ತು. ಅವನ ಶತ್ರುಗಳು ಲಜ್ಜಿತರಾಗಿ ಅವನ ಪ್ರಶಂಸೆ ಮಾಡತೊಡಗಿದ್ದರು.

ಆದರೆ ಆ ಮೂವರು ಮೂಲ ಅಪರಾಧಿಗಳು ಮರುದಿನವೂ ಶಾಲೆಗೆ ಬರಲಿಲ್ಲ. ಮೂರನೆಯ ದಿನವೂ ಅವರ ಪತ್ತೆ ಇಲ್ಲ. ಮನೆಯಿಂದೇನೋ ಶಾಲೆಗೆಂದೇ ಅವರು ಹೊರಡುತ್ತಿದ್ದರು. ಆದರೆ ಮಧ್ಯದಲ್ಲೇ ಎಲ್ಲಾದರೂ ಅಡ್ಡದಾರಿ ಹಿಡಿಯುತ್ತಿದ್ದರು. ದಿನವಿಡೀ ಯಾವುದಾದರೊಂದು ಮರದಡಿಯಲ್ಲಿ ಕಾಲ ಕಳೆಯುತ್ತಿದ್ದರು. ಅಥವಾ ಕುಟ್ಟಿದೊಣ್ಣೆಯಾಡುತ್ತಿದ್ದರು. ಕೊನೆಗೆ ಕತ್ತಲಾಗುವಾಗ ಮನೆಯತ್ತ ಸಾಗುತ್ತಿದ್ದರು.

Sri Vidyabharathi Book Centre, Sringeri

CC-O. In Public Domain. Digitized by eGangotri

ಈ ಮಹಾಯುದ್ಧದ ಇತರ ಕೆಲ ವೀರಭಟರು ಶಾಲೆಗೆ ಹೋಗುತ್ತಿದ್ದಾರೆ. ಅವರ ವಿಚಾರದಲ್ಲಿ ಹೆಡ್ಮಾಸ್ಟರರೇನೂ ಮಾಡಿಲ್ಲ—ಎಂಬ ಸಮಾಚಾರ ಈ ಮೂವರಿಗೂ ತಿಳಿದು ಬಂತು. ಆದರೂ ಮನಸ್ಸಿನೊಳಗಿನ ಶಂಕೆಯು ದೂರವಾಗಿರಲಿಲ್ಲ. ರಾಜಣ್ಣನು ಅವಶ್ಯ ದೂರು ಹೇಳಿರಬೇಕು. ಯಾವಾಗ ನಾವು ಶಾಲೆಗೆ ಬರುತ್ತೇವೆಂದು ಕಾಯುತ್ತಿರಬೇಕು. ಹೀಗಂದುಕೊಂಡು ಧೈರ್ಯ ಬಾರದೆ ಆ ಮೂವರೂ ಶಾಲೆಗೆ ಹೋಗುವ ಸಾಹಸ ಮಾಡಲಿಲ್ಲ.

5

ನಾಲ್ಕನೆಯ ದಿನ ಬೆಳಗ್ಗೆ ಆ ಮೂವರು ಅಪರಾಧಿಗಳೂ ಸೇರಿ, ಅಂದು ಯಾವ ರಸ್ತೆ ಹಿಡಿಯುವುದೆಂದು ಯೋಚನೆ ಮಾಡುತ್ತಿದ್ದರು. ಅಷ್ಟರಲ್ಲಿ ರಾಜಣ್ಣನು ಬರುತ್ತಿರುವುದು ಕಾಣಿಸಿತು. ಅವನನ್ನು ನೋಡಿದೊಡನೆ ಆಶ್ಚರ್ಯವಾಯಿತು. ಆದರೆ ಆತ ಅವರ ಮನೆಬಾಗಿಲಿಗೇ ಬರುವುದು ನೋಡಿ ಸ್ವಲ್ಪ ಆಶೆಯೂ ಆಯಿತು.

ಇವರು ಆತನನ್ನು ನೋಡಿ ಬಾಯಿ ತೆರೆಯುವ ಮೊದಲೇ ರಾಜಣ್ಣನು ಹೇಳಲಾರಂಭಿಸಿದನು—'ಏನಿದು ಗೆಳೆಯರೇ? ನೀವೇಕೆ ಶಾಲೆಗೆ ಬರುವುದಿಲ್ಲ? ಮೂರು ದಿನಗಳಿಂದ ಗೈರುಹಾಜರ್ರಾಗ್ಯಿದ್ದೀರಿ?'

Sri Vidyabharathi Book Centre, Sringeri

CC-O. In Public Domain. Digitized by eGangotri

ಜಗ—'ಶಾಲೆಗೇಕೆ ಬರುವುದು? ಜೀವ ಭಾರವಾಗಿದೆಯೇ? ಹೆಡ್ಮಾಸ್ಟರರು ನಮ್ಮ ಒಂದು ಎಲುಬು ಕೂಡಾ ಉಳಿಸಲಿಕ್ಕಿಲ್ಲ.'

ರಾಜ—'ಏಕೆ? ಅಲಿ, ದುರ್ಗಾ ಮುಂತಾದವರೆಲ್ಲ ಬರುತ್ತಿಲ್ಲವೇ? ಹೆಡ್ಮಾಸ್ಟರರು ಯಾರ ಹತ್ತಿರವಾದರೂ, ಏನಾದರೂ ಕೇಳಿದ್ದಾರೆಯೇ?'

ಜಯ—'ನೀನು ಅವರನ್ನೆಲ್ಲ ಬಿಟ್ಟುರಬೇಕು. ಆದರೆ ನಮ್ಮನ್ನೇಕೆ ನೀನು ಬಿಡುವೆ? ಪ್ರತಿಯೊಬ್ಬರಿಗೂ ಮೂಳೆ ಮುರಿಯುವಷ್ಟು ಛಡಿ ಏಟು ಬೀಳಬಹುದು.'

ರಾಜ—'ಇಂದು ಶಾಲೆಗೆ ಬಂದು, ಬೇಕಾದರೆ ಪರೀಕ್ಷೆ ಮಾಡಿ ನೋಡಿ.'

ಜಯ—'ಈ ವೇಷವೆಲ್ಲ ಬೇಡ. ಇವೀಗ ನಮಗೆ ಏಟು ಬೀಳಿಸಲಿಕ್ಕೊಂದು ಉಪಾಯ!'

ರಾಜ—'ನಾನೇನೂ ಊರು ಬಿಟ್ಟು ಓಡಿಹೋಗುವುದಿಲ್ಲ ತಾನೆ? ಮೊನ್ನೆ ನೀವು ನನ್ನ ಸತ್ಯಕ್ಕಾಗಿ ಶಿಕ್ಷೆ ಕೊಟ್ಟಿರಿ. ಇಂದು ನಾನು ಸುಳ್ಳು ಹೇಳುವುದಕ್ಕೊಮ್ಮೆ ಬಹುಮಾನ ಕೊಟ್ಟುಬಿಡಿ.'

ಜಯ—'ಹಾಗಾದರೆ ನೀನು ದೂರು ಹೇಳಿಲ್ಲವೆಂದು ಸತ್ಯವಾಗಿ ಹೇಳುವಿಯಾ?'

ರಾಜ—'ದೂರು ಹೇಳುವ ಸಂದರ್ಭವಾದರೂ ಏನು? ನೀವು ನನಗೆ ಹೊಡೆದಿರಿ. ನಾನು ನಿಮಗೆ ಹೊಡೆದಿದ್ದೇನೆ.

Sri Vidyabharathi Book Centre, Sringeri

 CC-0. In Public Domain. Digitized by eGangotri

ನಿಮ್ಮ ಆ ಒಂದು ಗುದ್ದು ಕಿಬ್ಬೊಟ್ಟೆಗೆ ಬೀಳದಿದ್ದರೆ ನಾನು ನಿಮ್ಮನ್ನೆಲ್ಲ ಹೊಡೆದು ಓಡಿಸಿಬಿಡುತ್ತಿದ್ದೆ. ನಮ್ಮನಮ್ಮೊಳಗಿನ ಜಗಳದ ದೂರು ಹೇಳುವ ದುರಭ್ಯಾಸ ನನ್ನಲ್ಲಿಲ್ಲ.'

ಜಗ—'ಆಯಿತಪ್ಪ, ಹೊರಡುತ್ತೇವೆ. ಆದರೆ ಧೈರ್ಯ ಬರುವುದಿಲ್ಲ. ನೀನು ಪ್ರಾಯಶಃ ನಂಬಿಕೆ ಹುಟ್ಟಿಸಿ, ನಮ್ಮನ್ನು ಕರೆದೊಯ್ದು ಚಟ್ನಿ ಮಾಡಬೇಕೆಂದಿರುವೆ.'

ರಾಜ—'ನನಗೆ ಸುಳ್ಳು ಹೇಳುವ ಹುಚ್ಚು ಇಲ್ಲವೆಂದು ನಿಮಗೆ ಗೊತ್ತೇ ಇದೆಯಲ್ಲ.'

ಈ ಮಾತುಗಳನ್ನು ಅವರ ಎಲ್ಲ ತರದ ಸಂದೇಹವೂ ದೂರವಾಗುವ ರೀತಿಯಲ್ಲಿ, ವಿಶ್ವಾಸವುಂಟಾಗುವ ಧ್ವನಿಯಲ್ಲಿ ಹೇಳಿದನು. ರಾಜಣ್ಣನು ಎದ್ದುಹೋದಮೇಲೆ ಆ ಮೂರು ಮಂದಿಯೂ ಬಹು ಹೊತ್ತಿನವರೆಗೆ ಆ ಮಾತುಗಳ ವಿವೇಚನೆ ಮಾಡುತ್ತಲೇ ಇದ್ದರು. ಕೊನೆಗೆ, ಹೇಗಾದರಾಗಲಿ ಅಂದು ಹೋಗಿ ನೋಡುವುದೆಂದು ನಿಶ್ಚಯ ಮಾಡಿಕೊಂಡರು.

ಸರಿಯಾಗಿ ಹತ್ತು ಗಂಟೆಗೆ ಆ ಮೂರು ಜನರೂ ಶಾಲೆಗೆ ಹೋಗಿ ಸೇರಿದರು. ಆದರೂ ಮನಸ್ಸಿನಲ್ಲಿ ತುಂಬಾ ಕಳವಳವಿತ್ತು. ಅವರ ಮುಖದ ಬಣ್ಣವೇ ಬದಲಾಗಿಹೋಗಿತ್ತು.

ಹೆಡ್ಮಾಸ್ಟರರು ಕ್ಲಾಸಿಗೆ ಬಂದರು. ಹುಡುಗರು ಎದ್ದು ನಿಂತು ಅವರ ಸ್ವಾಗತ ಮಾಡಿದರು. ಆ ಮೂವರು ಮಿತ್ರರತ್ತ ಅವರು ತೀಕ್ಷ್ಣದೃಷ್ಟಿಯಿಂದ ನೋಡಿ ಇಷ್ಟು ಮಾತ್ರ ಹೇಳಿದರು—'ನೀವು ಮೂವರೂ ಮೂರು ದಿನಗಳಿಂದ

CC-O. In Public Domain. Digitized by eGangotri

ಗೈರುಹಾಜರಾಗಿದ್ದೀರಿ. ಕ್ಲಾಸಿನಲ್ಲಿ ಕಲಿಸಿಕೊಟ್ಟಿದ್ದ ಪಾಠಗಳನ್ನು ಬೇರೆಯವರಿಂದ ಕಲಿತುಕೊಳ್ಳಿರಿ.'

ಆ ಬಳಿಕ ಎಂದಿನಂತೆ ಪಾಠ ಕಲಿಸಲಾರಂಭಿಸಿದರು.

6

ಮಧ್ಯಾಹ್ನ ಹನ್ನೆರಡು ಗಂಟೆಗೆ ವಿರಾಮ ದೊರೆತಾಗ ಆ ಮೂರು ಮಂದಿ ಮಿತ್ರರೂ ಸೇರಿಕೊಂಡು ಮಾತುಕತೆ ಆರಂಭಿಸಿದರು.

ಜಯ—'ಜೀವದಾಸೆ ಬಿಟ್ಟೇ ನಾವಿಂದು ಶಾಲೆಗೆ ಬಂದುದು. ಆದರೆ ರಾಜಣ್ಣನು ಕೊಟ್ಟ ಮಾತನ್ನು ಕಾಪಾಡುವ ವೀರನೇ ಸರಿ!'

ಮಹಮ್ಮದಾಲಿ—'ನನಗೇನೋ ತೋರುತ್ತದೆ—ನಿಜವಾಗಿಯೂ ಅವನು ದೇವತಾಮನುಷ್ಯ! ಈ ವಿಚಾರ ಕಣ್ಣಾರೆ ಕಂಡದ್ದರಿಂದ ಮಾತ್ರ ನಾನು ನಂಬಿದೆ.'

ಜಗ—'ಸಭ್ಯತನವೆಂದರೆ ಇದಕ್ಕನ್ನಬೇಕು. ಅಂಥವನ ವಿಚಾರದಲ್ಲಿ ಅನ್ಯಾಯ ಮಾಡಿದ್ದೆಂದರೆ ನಿಜವಾಗಿಯೂ ಅದು ದೊಡ್ಡ ತಪ್ಪು ಕೆಲಸ.'

ದುರ್ಗಾ—'ಹೋಗುವ ಹಾಗಾದರೆ; ಆತನೊಡನೆ ಕ್ಷಮೆ ಕೇಳುವ.'

ಜಯ—'ಹೌದು. ನೀನು ಹೇಳಿದ್ದು ಸರಿ. ಇಂದೇ ಕ್ಷಮಾಪಣೆ ಕೇಳುವ.'

Sri Vidyabharathi Book Centre, Sringeri

CC-0. In Public Domain. Digitized by eGangotri

ಸಾಯಂಕಾಲ ಶಾಲೆ ಬಿಟ್ಟಾದಮೇಲೆ ಕ್ಲಾಸಿನ ಮಕ್ಕಳೆಲ್ಲ ರಾಜಣ್ಣನ ಸುತ್ತಲೂ ಹೋಗಿ ಸೇರಿದರು. ಜಗನ್ನಾಥನು ಅವರ ಮುಖಂಡನಾಗಿ ಹೇಳಿದ—'ಸಹೋದರನೇ, ನಾವೆಲ್ಲ ನಿನ್ನ ವಿಚಾರದಲ್ಲಿ ಅಪರಾಧಿಗಳಾಗಿದ್ದೇವೆ. ಮಾಡಿದ ಅನ್ಯಾಯದ ವಿಷಯದಲ್ಲಿ ನಾವು ತುಂಬಾ ಲಜ್ಜೆಪಡುತ್ತೇವೆ. ನಮ್ಮ ಅಪರಾಧವನ್ನು ಕ್ಷಮಿಸಿಬಿಡು. ನೀನು ನಿಜವಾಗಿಯೂ ದೇವತಾಮನುಷ್ಯನಾಗಿರುವೆ. ನಾವೆಲ್ಲ ಉದ್ದಂಡರೂ, ತುಂಟರೂ, ಮೂರ್ಖರೂ ಆಗಿದ್ದೇವೆ. ದಯವಿಟ್ಟು ನಮ್ಮ ತಪ್ಪನ್ನು ಮರೆತುಬಿಡು.'

ರಾಜಣ್ಣನ ಕಣ್ಣಲ್ಲಿ ನೀರು ಬಂತು. ಹೇಳತೊಡಗಿದನು —'ಮೊದಲು ಸಹ ನಾನು ನಿಮ್ಮನ್ನು ಸಹೋದರರಂತೆಯೇ ಭಾವಿಸುತ್ತಿದ್ದೆ. ಇನ್ನು ಸಹ ಹಾಗೆಯೇ ತಿಳಕೊಳ್ಳುವೆ. ಅಣ್ಣತಮ್ಮಂದಿರ ಜಗಳದಲ್ಲಿ ಕ್ಷಮೆ ಏತರದು?'

ಎಲ್ಲರೂ ಅವನನ್ನು ಅಪ್ಪಿಕೊಂಡರು. ಸಮಾಚಾರ ಇಡೀ ಶಾಲೆಯಲ್ಲಿ ಹಬ್ಬಿಹೋಯಿತು. ಶಾಲೆಯ ಎಲ್ಲ ವಿದ್ಯಾರ್ಥಿಗಳೂ ರಾಜಣ್ಣನನ್ನು ಗೌರವಿಸಲಾರಂಭಿಸಿದರು. ಅವನೇ ಮರುವರ್ಷ 'ಶಾಲಾ-ನಾಯಕ'ನಾಗಿ ಸರ್ವಾನುಮತದಿಂದ ಚುನಾಯಿಸಲ್ಪಟ್ಟನು.

ಮೊದಲು ಸತ್ಯ ಹೇಳಿದ್ದಕ್ಕೆ ಶಿಕ್ಷೆ ದೊರಕಿತು. ಬಳಿಕ ಬಹುಮಾನ ದೊರಕಿತು.

'ಸತ್ಯದ ಸಾಮರ್ಥ್ಯ' ಎಲ್ಲರಿಗೂ ಗೊತ್ತಾಯಿತು.

Sri Vidyabharathi Book Centre, Sringeri

CC-O. In Public Domain. Digitized by eGangotri

Sri Vidyabharathi Book Centre, Sringeri

CC-O. In Public Domain. Digitized by eGangotri

Sri Vidyabharathi Book Centre, Sringeri

CC-O. In Public Domain. Digitized by eGangotri

Sri Vidyabharathi Book Centre, Sringeri

CC-O. In Public Domain. Digitized by eGangotri

Sri Vidyabharathi Book Centre, Sringeri

ಮಕ್ಕಳ ಸಾಹಿತ್ಯ

CC-O. In Public Domain. Digitized by eGangotri

ಹೊಸ ರೂಪದ 'ಹಿತೋಪದೇಶ'—ಕೆ. ಎಸ್. ರಂಗಪ್ಪ

1. ಕಥೆಗಳ ಕಥೆ ಮತ್ತು ಕುಚೇಷ್ಟೆಯ ಕೋತಿ 3 00
2. ತಕ್ಕನಿಗೆ ಪೂಜೆ 3 00
3. ದಿಟ್ಟ ನೊಲ 3 00
4. ಕೊಲೆಗಾರನ ಕೊಲೆ (ಮಕ್ಕಳ ನಾಟಕ) 3 00
5. ಹೀನ ಸೇವಕ 3 00
6. ರಾವಣ ಸನ್ಯಾಸಿ (ಮಕ್ಕಳ ನಾಟಕ) 3 00

'ನೀತಿಕಥಾಭಂಡಾರ' (ಸಚಿತ್ರ)—ಎ. ಎನ್. ಭಟ್

1. ಹೊಲದಲ್ಲಿ ಬಿತ್ತಿದ ಹಣ ಮತ್ತು ಇತರ ಕಥೆಗಳು 3 00
2. ಪಾರಿವಾಳದ ಪಂಚಶೀಲ ಮತ್ತು ಇತರ ಕಥೆಗಳು 3 00
3. ಬಲವೋ, ಬುದ್ಧಿಯೋ? ಮತ್ತು ಇತರ ಕಥೆಗಳು 3 00
4. ಕೋಳಿ-ನಾಯಿ ಜಗಳ ಮತ್ತು ಇತರ ಕಥೆಗಳು 3 00
5. ಹದ್ದು-ಕರಡಿಯ ನ್ಯಾಯಸಂಧಾನ ಮತ್ತು ಇತರ ಕಥೆಗಳು 3 00

ಪುಟ್ಟಣ್ಣ ಹೇಳಿದ ಕಥೆಗಳು (ಸಚಿತ್ರ)—ಎಂ. ಎಸ್. ಪುಟ್ಟಣ್ಣ

1. ಹಕ್ಕಿಯ ಬುದ್ಧಿ ಮತ್ತು ಇತರ ಐದು ಕಥೆಗಳು 3 00
2. ಹಸು ಮತ್ತು ಹೆಗ್ಗಣ ಮತ್ತು ಇತರ ಏಳು ಕಥೆಗಳು 3 00
3. ನ್ಯಾಯಾಧಿಪತಿಯ ಯುಕ್ತಿ ಮತ್ತು ಇತರ ಏಳು ಕಥೆಗಳು 3 00

ಶಾಲೆಯ ಕಥೆಗಳು—ಕೆ. ರಾಮಕೃಷ್ಣ ಉಡುಪ

1. ಆ ಒಂದು ರೂಪಾಯಿ! 3 00
2. ಸತ್ಯದ ಸಾಮರ್ಥ್ಯ 3 00
3. ನಮ್ಮಣ್ಣ 3 00

ಮಕ್ಕಳ ಕವನಗಳು—ಚಂದ್ರಶೇಖರಯ್ಯ

1. ತುಂಟರ ಕ್ರಿಕೆಟ್ ಮತ್ತು ಇತರ ಮಕ್ಕಳ ಕವನಗಳು 4 00

ಭಾರತ ಸರಕಾರದಿಂದ ಬಹುಮಾನಿತ ಪುಸ್ತಕಗಳು (ಸಚಿತ್ರ)

1. ಬ್ರಹ್ಮಾಂಡ ನೋಡು, ವಿಜ್ಞಾನ ಕಲಿ—ಸಿ. ಕೆ. ವೆಂಕಟನರಸಿಂಹಯ್ಯ 6 00
2. ನಮ್ಮ ಮನಸ್ಸು—ಕೆ. ರಾಮಕೃಷ್ಣ ಉಡುಪ 3 75
3. ಕಾಷ್ಠ-ವ್ಯಸನ—ಟಿ. ಎನ್. ಮಹಾಲಕ್ಷ್ಮಿ 3 75

ಗೀತಾ ಬುಕ್ ಹೌಸ್ : ಕೆ. ಆರ್. ಸರ್ಕಲ್ : ಮೈಸೂರು

Sri Vidyabharathi Book Centre, Sringeri

ಬೆಲೆ: ರೂ. 3